## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ 1000 ನಿರುದ್ಯೋಗಿ ಯುವಕರಿಗೆ ಬೈಕ್ ಕೊಂಡುಕೊಳ್ಳಲು ಆಯವ್ಯಯದಲ್ಲಿ ಘೋಷಿಸಿರುವ ಹೊಸ ಕಾರ್ಯಕ್ರಮಕ್ಕೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಆಯವ್ಯಯ ಭಾಷಣ ಕಂಡಿಕೆ 90.
2. ಪ್ರಸ್ತಾವನೆ ಸಂಖ್ಯೆ: ದೇಹಿನಿ/ಹೊ.ಯೋ/ಸಿಆರ್-01/2020-21 ದಿನಾಂಕ :21.04.2020

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
14 OCT 2020

| | |
|---|---|
| ವ್ಯ.ನಿ. | ಪ್ರ.ವ್ಯ.-1 |
| ಸ.ಪ್ರ.ವ್ಯ. | ಪ್ರ.ವ್ಯ.-2 |

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2020-2021ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ:90ರಲ್ಲಿ **"ಇತ್ತೀಚೆಗೆ ಇ-ವಾಣಿಜ್ಯ ಸಂಸ್ಥೆಗಳು ಮನೆ ಬಾಗಿಲಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸುವುದು ಸಾಮಾನ್ಯವಾಗಿದೆ. ಇಂತಹ ಉತ್ಪನ್ನಗಳನ್ನು ಸರಬರಾಜು ಮಾಡುವ 1000 ಯುವಕರಿಗೆ ಬೈಕ್ ಕೊಳ್ಳಲು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ತಲಾ ರೂ.25.000/-ಗಳಂತೆ ರೂ.2.50 ಕೋಟಿಗಳ ಆರ್ಥಿಕ ನೆರವು ನೀಡಲಾಗುವುದೆಂದು"** ಘೋಷಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಇವರು ಆಯವ್ಯಯ ಭಾಷಣ ಕಂಡಿಕೆ:90ರಲ್ಲಿ ಘೋಷಿಸಿರುವಂತೆ ಪ್ರಸ್ತುತ ಸಾಲಿನ ಆಯವ್ಯದಲ್ಲಿ ಒದಗಿಸಿರುವ ಅನುದಾನದಲ್ಲಿ ಒಟ್ಟು ರೂ.2.50 ಕೋಟಿಗಳ ವೆಚ್ಚದಲ್ಲಿ ಹಿಂದುಳಿದ ವರ್ಗಗಳ 1000 ಅಭ್ಯರ್ಥಿಗಳಿಗೆ Zomato, Swiggy, Uber eats, Dominos, Amazon ಮೊದಲಾದ ಕಂಪನಿಗಳು/ಸಂಸ್ಥೆಗಳ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲು ಬೈಕ್ ಗಳನ್ನು ಕೊಂಡುಕೊಳ್ಳಲು ನಿಗಮದಿಂದ ಶೇ.30% ರಷ್ಟು ಗರಿಷ್ಟ ರೂ.25.000/-ಗಳ ಸಹಾಯಧನ ಮಂಜೂರು ಮಾಡುವ ಈ ಹೊಸ ಕಾರ್ಯಕ್ರಮಕ್ಕೆ ಹಾಗೂ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 300 ಬಿಎಂಎಸ್ 2020, ಬೆಂಗಳೂರು**
**ದಿನಾಂಕ:09-10-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-90 ರಲ್ಲಿ ಘೋಷಿಸಿರುವಂತೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ 1000 ನಿರುದ್ಯೋಗಿ ಯುವಕರಿಗೆ ಬೈಕ್ ಕೊಂಡುಕೊಳ್ಳಲು ನಿಗಮದಿಂದ ತಲಾ ರೂ. 25,000/- ಗಳ ಸಹಾಯಧನ ಸೌಲಭ್ಯ ನೀಡುವ ಹೊಸ ಕಾರ್ಯಕ್ರಮಕ್ಕೆ ಹಾಗೂ ಮಾರ್ಗಸೂಚಿಗಳಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

...2

<u>ಷರತ್ತುಗಳು :-</u>

**ಈ ಕಾರ್ಯಕ್ರಮವನ್ನು 2020-21ನೇ ಸಾಲಿನಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಅನುದಾನದ ಮಿತಿಯಲ್ಲಿಯೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.**

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 203 ವೆಚ್ಚ-3/2020 ದಿನಾಂಕ:29.09.2020 ಹಾಗೂ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ದಿನಾಂಕ:25.06.2020ರಂದು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಕೆ.ಅಶ್ವಥ್) 9/x/20
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

<u>ಇವರಿಗೆ:-</u>

1. ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ) ವಿಧಾನಸೌಧ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು.

<u>ಪ್ರತಿ:-</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

*******

## ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 300 ಬಿಎಂಎಸ್ 2020, ದಿನಾಂಕ:೦9.10.2020**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ 1000 ನಿರುದ್ಯೋಗಿ ಯುವಕರಿಗೆ ಬೈಕ್ ಕೊಂಡುಕೊಳ್ಳಲು ಆಯವ್ಯಯದಲ್ಲಿ ಘೋಷಿಸಿರುವ ಹೊಸ ಕಾರ್ಯಕ್ರಮ ಅನುಷ್ಠಾನಕ್ಕೆ ಮಾರ್ಗಸೂಚಿ.

ಪ್ರಸ್ತಾವನೆ:-

ಸನ್ಮಾನ್ಯ ಮುಖ್ಯಮಂತ್ರಿಯವರ 2020-21ನೇ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ-90ರಲ್ಲಿ **"ಇತ್ತೀಚಿಗೆ ಇ-ವಾಣಿಜ್ಯ ಸಂಸ್ಥೆಗಳು ಮನೆಬಾಗಿಲಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸುವುದು ಸಾಮಾನ್ಯವಾಗಿದೆ. ಇಂತಹ ಉತ್ಪನ್ನಗಳನ್ನು ಸರಬರಾಜು ಮಾಡುವ 1000 ಯುವಕರಿಗೆ ಬೈಕ್ ಕೊಳ್ಳಲು ಡಿ.ದೇವರಾಜಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದತಲಾ ರೂ.25,000/- ಗಳಂತೆ ರೂ.2.50 ಕೋಟಿಗಳ ಆರ್ಥಿಕ ನೆರವು ನೀಡಲಾಗುವುದೆಂದು"** ಘೋಷಿಸಲಾಗಿರುತ್ತದೆ.

ಅದರಂತೆ, ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು ಮತ್ತು ನಿಯಮ/ನಿಬಂಧನೆಗಳು ಈ ಕೆಳಕಂಡಂತೆ ಇವೆ.

1. **ಯೋಜನೆಉದ್ದೇಶ:-** ನಗರ ಪ್ರದೇಶಗಳಲ್ಲಿ Zomato, Swiggy, Uber eats, Dominos, Amazonಮೊದಲಾದಕಂಪನಿಗಳು/ಸಂಸ್ಥೆಗಳು ಉದ್ಯೋಗ ಪಡೆಯಲು ಬೈಕ್ ಹೊಂದಿರಬೇಕೆಂಬ ನಿಬಂಧನೆಯನ್ನು ಪೂರೈಸಲು, ಯುವಕರಿಗೆ ಬೈಕ್ ಕೊಂಡುಕೊಳ್ಳಲು ಬ್ಯಾಂಕುಗಳು, ಸಹಕಾರ ಸಂಘಗಳು ಹಾಗೂ ಅಂಗೀಕೃತ ಸರ್ಕಾರೇತರ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಆರ್ಥಿಕ ನೆರವುಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

2. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-**

ಅ. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30/03/2002ರ ಸಂಖ್ಯೆ ಸಕಇ 225 ಬಿಸಿಎ 2000 ಆದೇಶದಲ್ಲಿ ಗುರ್ತಿಸಿದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ, ಉಪ್ಪಾರ, ಅಂಬಿಗರ, ಮಡಿವಾಳ, ಸವಿತ ಮತ್ತು ಅಲೆಮಾರಿ/ಅರೆಅಲೆಮಾರಿ ಜಾತಿಗೆ ಹಾಗೂ ಹಾಗೂ ಇವುಗಳ ಉಪಜಾತಿಗೆ ಸೇರಿದವರನ್ನು ಹೊರತುಪಡಿಸಿ)

ಆ. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.98,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ.1,20,000/-ಗಳನ್ನು ಮೀರಿರಬಾರದು.

ಇ. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಈ. ಅರ್ಜಿದಾರರ ವಯಸ್ಸು 18 ರಿಂದ 45 ವರ್ಷಗಳ ಮಿತಿಯೊಳಗಿರಬೇಕು.

ಉ. ಸರ್ಕಾರದ/ನಿಗಮದ ಬೇರೆಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಊ. ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.

ಋ. ಅಭ್ಯರ್ಥಿಯು Zomato, Swiggy, Uber eats, Dominos, Amazon ಮೊದಲಾದ ಕಂಪನಿಗಳು/ಸಂಸ್ಥೆಗಳಲ್ಲಿ ಉದ್ಯೋಗ ಪಡೆದಿರುವ ಬಗ್ಗೆ ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಬೇಕು.

ಎ. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್/ಹಣಕಾಸು ಸಂಸ್ಥೆಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

...2

3. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-** ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಬೇಕು.

   1. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30/03/2002ರ ಸಂಖ್ಯೆ ಸಕಇ 225 ಬಿಸಿಎ 2000 ಆದೇಶದಲ್ಲಿ ಗುರ್ತಿಸಿದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ (ವಿಶ್ವಕರ್ಮ, ಉಪ್ಪಾರ, ಅಂಬಿಗರ, ಮಡಿವಾಳ, ಸವಿತ ಮತ್ತು ಅಲೆಮಾರಿ/ಅರೆಅಲೆಮಾರಿ ಜಾತಿಗೆ ಹಾಗೂ ಇವುಗಳ ಉಪಜಾತಿಗಳಿಗೆ ಸೇರಿದವರನ್ನು ಹೊರತುಪಡಿಸಿ) ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್ ರಿಂದ ನಿಗದಿತ ನಮೂನೆಯಲ್ಲಿ ಪಡೆದಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
   2. ಅರ್ಜಿದಾರರ ವಾಸದ ಪುರಾವೆಗಾಗಿ ಸಕ್ಷಮ ಪ್ರಾಧಿಕಾರಿಗಳು ನೀಡಿದ ಪಡಿತರ ಚೀಟಿ/ಚುನಾವಣಾಗುರುತಿನಚೀಟಿ/ಆಧಾರಕಾರ್ಡ್‌ನದೃಢೀಕೃತ ಪ್ರತಿ ಒದಗಿಸಬೇಕು.
   3. ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
   4. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ/ಹಣಕಾಸು ಸಂಸ್ಥೆಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
   5. ಅಭ್ಯರ್ಥಿಯು ದ್ವಿಚಕ್ರ ವಾಹನ ಚಾಲನ ಪರವನಾಗಿ ಹೊಂದಿರುವ ಬಗ್ಗೆ ದೃಢೀಕೃತ ನಕಲನ್ನು ಸಲ್ಲಿಸಬೇಕು.
   6. ಅರ್ಜಿದಾರರು ಕೊಂಡುಕೊಳ್ಳುವ ವಾಹನದ Invoice ಒದಗಿಸುವುದು.
   7. ಸಾಲದ ಭದ್ರತೆಗೆ ಬ್ಯಾಂಕ್ ವ್ಯವಸ್ಥಾಪಕರು ಕೋರುವ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.

4. **ಘಟಕವೆಚ್ಚ(ಸಾಲ ಮತ್ತು ಸಹಾಯಧನದ ಮೊತ್ತ):-**

   **ಸಾಲದಮೊತ್ತ:-** ಅರ್ಜಿದಾರರು ಬೈಕ್ ಕೊಂಡುಕೊಳ್ಳಲು ಬ್ಯಾಂಕುಗಳು, ಸಹಕಾರ ಸಂಘಗಳು ಹಾಗೂ ಅಂಗೀಕೃತ ಸರ್ಕಾರೇತರ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಆರ್ಥಿಕ ನೆರವು ಒದಗಿಸಲು ನಿಗಮದಿಂದ ತಲಾ ರೂ.25,000/-ಗಳ ಸಹಾಯಧನವನ್ನು ಮಂಜೂರು ಮಾಡುವುದು. ಉಳಿಕೆ ಮೊತ್ತವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಸಾಲ ಪಡೆಯುವುದು.

   **ಸಹಾಯಧನ:-** ಬ್ಯಾಂಕ್ ಮಂಜೂರು ಮಾಡುವ ಸಾಲದ ಮೊತ್ತದಲ್ಲಿ ತಲಾ ರೂ.25,000/-ಗಳನ್ನು ನಿಗಮದಿಂದ ಸಹಾಯಧನ ಮಂಜೂರು ಮಾಡಲಾಗುವುದು.

   **ಬಡ್ಡಿ:-** ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳು ಮಂಜೂರು ಮಾಡುವ ಸಾಲಕ್ಕೆ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳು ಚಾಲ್ತಿಯಲ್ಲಿರುವ ಬಡ್ಡಿಯನ್ನು ವಿಧಿಸಲಾಗುತ್ತದೆ.

**ಫಲಾನುಭವಿಗಳ ಆಯ್ಕೆ:-**

ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಇವರಅಧ್ಯಕ್ಷತೆಯಲ್ಲಿ ರಚಿಸಿರುವ ಈ ಕೆಳಕಂಡ ಆಯ್ಕೆ ಸಮಿತಿ ಮೂಲಕ ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

| ಕ್ರ ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |

...3

| | | |
|---|---|---|
| 3 | ಜಿಲ್ಲಾ ಅಧಿಕಾರಿಗಳು,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಪ್ರಧಾನ ವ್ಯವಸ್ಥಾಪಕರು,<br>ಜಿಲ್ಲಾಕೈಗಾರಿಕಾಕೇಂದ್ರ | ಸದಸ್ಯರು |
| 5 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು |
| 6 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

5. **ಸಾಲ ಮಂಜೂರಾತಿಯ ವಿಧಾನ:-**

a) ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

b) ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.

c) ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಉದ್ಯೋಗ ನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಎಲ್ಲಾಅಗತ್ಯ ದಾಖಲೆಗಳನ್ನು, ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆಅನುಗುಣವಾಗಿ ಆಯ್ಕೆ ಸಮಿತಿಯ ಪರವಾಗಿ ಅರ್ಜಿಗಳನ್ನು ಅಭ್ಯರ್ಥಿಯು ಸಾಲ ಪಡೆಯಲು ಬಯಸುವ ಬ್ಯಾಂಕ್/ಹಣಕಾಸು ಸಂಸ್ಥೆಗೆ ಅರ್ಜಿಯನ್ನು ಶಿಫಾರಸ್ಸು ಮಾಡುವುದು.

d) **ಸಾಲ ಮತ್ತು ಸಹಾಯಧನದ ವಿತರಣೆ:-** ಬ್ಯಾಂಕ್/ಹಣಕಾಸು ಸಂಸ್ಥೆಗಳು ಸಾಲ ಮಂಜೂರು ಮಾಡುವ ಬಗ್ಗೆ ನೀಡಿದ ಮಂಜೂರಾತಿ ಪತ್ರ/ಕ್ಲೈಂ ಲೆಟರ್‌ಅನ್ವಯ ಸಹಾಯಧನ ಮಂಜೂರಾತಿಗೆ ಜಿಲ್ಲಾ ಸಮಿತಿಯ ಅಧ್ಯಕ್ಷರ ಅನುಮೋದನೆ ಪಡೆದು ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆಯನ್ನು ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಬೇಕು. ಸಹಾಯಕ ಪ್ರಧಾನ ವ್ಯವಸ್ಥಾಪಕರು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ಮೀಸಲಾತಿ ಅನುಪಾತವನ್ನು ಪರಿಶೀಲಿಸಿ ದೃಡೀಕರಿಸಿಕೊಂಡು ಸಹಾಯಧನವನ್ನು ಸಂಬಂಧಿಸಿದ ಬ್ಯಾಂಕ್ ಶಾಖೆಯ/ಹಣಕಾಸು ಸಂಸ್ಥೆಯ ಹೆಸರಿಗೆಚೆಕ್ ರಚಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಕಳುಹಿಸುವುದು. ಜಿಲ್ಲಾ ವ್ಯವಸ್ಥಾಪಕರು ಸಾಲ ಮಂಜೂರಾತಿ ಬಗ್ಗೆ ದೃಡೀಕರಿಸಿಕೊಂಡು ಸಂಬಂಧಿಸಿದ ಬ್ಯಾಂಕಿಗೆ ಚೆಕ್ಕನ್ನು ಕಳುಹಿಸಬೇಕು. ಸಂಬಂಧಿಸಿದ ಬ್ಯಾಂಕ್ ಶಾಖೆ/ಹಣಕಾಸು ಸಂಸ್ಥೆಯವರು ನಿಗಮದಿಂದ ಪಡೆದ ಸಹಾಯಧನ ಮತ್ತು ಸಾಲದ ಮೊತ್ತವನ್ನು ಒಟ್ಟಾರೆಇನ್‌ವಾಯ್ಸ್/ಕಂಪನಿದಾರರಿಗೆ ಪಾವತಿಸಿ ಬೈಕ್ ಸರಬರಾಜು ಮಾಡಿದ ಬಗ್ಗೆ ನೊಂದಣಿ ಪ್ರತಿ (ಆರ್.ಸಿ.ಪುಸ್ತಕ) ಪಡೆದು ದೃಢೀಕರಿಸಿಕೊಳ್ಳುವುದು ಬ್ಯಾಂಕ್/ಹಣಕಾಸು ಸಂಸ್ಥೆಯ ವ್ಯವಸ್ಥಾಪಕರು ಮತ್ತು ಜಿಲ್ಲಾ ವ್ಯವಸ್ಥಾಪಕರ ಜವಾಬ್ದಾರಿಯಾಗಿರುತ್ತದೆ.

6. **ಸಾಲದ ಮರುಪಾವತಿ:-**ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲವನ್ನುಅವರು ನಿಗಧಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸುವುದು.

7. **ಸಹಾಯಧನ ವಿತರಣೆ:-**ಬ್ಯಾಂಕ್/ಹಣಕಾಸು ಸಂಸ್ಥೆಗಳು ಕಾರಣಾಂತರಗಳಿಂದ ಅಭ್ಯರ್ಥಿಗೆ ಸಹಾಯಧನ ವಿತರಿಸಿದ ಒಂದು ತಿಂಗಳಲ್ಲಿ ಸಾಲ ಮಂಜೂರು ಮಾಡದಿದ್ದಲ್ಲಿ ಅಂತಹ ಸಹಾಯಧನವನ್ನು ನಿಗಮಕ್ಕೆ ಒಂದು ತಿಂಗಳೊಳಗೆ ಹಿಂತಿರುಗಿಸಬೇಕು.

8. **ನಿಯಮಗಳಿಗೆ ತಿದ್ದುಪಡಿ:-** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

**ಫಲಾನುಭವಿಗಳ ಆಯ್ಕೆ:-**

ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಈ ಕೆಳಕಂಡ ಆಯ್ಕೆ ಸಮಿತಿ ಮೂಲಕ ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

| ಕ್ರ. ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾಕೈಗಾರಿಕಾಕೇಂದ್ರ | ಸದಸ್ಯರು |
| 5 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು |
| 6 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

9. **ಸಾಲ ಮಂಜೂರಾತಿಯ ವಿಧಾನ:-**

e) ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

f) ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢೀಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.

g) ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಉದ್ಯೋಗ ನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲೆಗಳನ್ನು, ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಆಯ್ಕೆ ಸಮಿತಿಯ ಪರವಾಗಿ ಅರ್ಜಿಗಳನ್ನು ಅಭ್ಯರ್ಥಿಯು ಸಾಲ ಪಡೆಯಲು ಬಯಸುವ ಬ್ಯಾಂಕ್/ಹಣಕಾಸು ಸಂಸ್ಥೆಗೆ ಅರ್ಜಿಯನ್ನು ಶಿಫಾರಸ್ಸು ಮಾಡುವುದು.

h) **ಸಾಲ ಮತ್ತು ಸಹಾಯಧನದ ವಿತರಣೆ:-** ಬ್ಯಾಂಕ್/ಹಣಕಾಸು ಸಂಸ್ಥೆಗಳು ಸಾಲ ಮಂಜೂರು ಮಾಡುವ ಬಗ್ಗೆ ನೀಡಿದ ಮಂಜೂರಾತಿ ಪತ್ರ/ಕ್ಲೈಂ ಲೆಟರ್‌ಅನ್ವಯ ಸಹಾಯಧನ ಮಂಜೂರಾತಿಗೆ ಜಿಲ್ಲಾ ಸಮಿತಿಯ ಅಧ್ಯಕ್ಷರ ಅನುಮೋದನೆ ಪಡೆದು ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆಯನ್ನು ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಬೇಕು. ಸಹಾಯಕ ಪ್ರಧಾನ ವ್ಯವಸ್ಥಾಪಕರು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲೆಗೆ

i) ನಿಗಧಿಪಡಿಸಿದ ಗುರಿ ಮತ್ತು ಮೀಸಲಾತಿ ಅನುಪಾತವನ್ನು ಪರಿಶೀಲಿಸಿ ದೃಡೀಕರಿಸಿಕೊಂಡು ಸಹಾಯಧನವನ್ನು ಸಂಬಂಧಿಸಿದ ಬ್ಯಾಂಕ್ ಶಾಖೆಯ/ಹಣಕಾಸು ಸಂಸ್ಥೆಯ ಹೆಸರಿಗೆ ಚೆಕ್ ರಚಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಕಳುಹಿಸುವುದು. ಜಿಲ್ಲಾ ವ್ಯವಸ್ಥಾಪಕರು ಸಾಲ ಮಂಜೂರಾತಿ ಬಗ್ಗೆ ದೃಡೀಕರಿಸಿಕೊಂಡು ಸಂಬಂಧಿಸಿದ ಬ್ಯಾಂಕಿಗೆಚೆಕ್ಕನ್ನು ಕಳುಹಿಸಬೇಕು. ಸಂಬಂಧಿಸಿದ ಬ್ಯಾಂಕ್ ಶಾಖೆ/ಹಣಕಾಸು ಸಂಸ್ಥೆಯವರು ನಿಗಮದಿಂದ ಪಡೆದ ಸಹಾಯಧನ ಮತ್ತು ಸಾಲದ ಮೊತ್ತವನ್ನು ಒಟ್ಟಾರೆಇನ್‌ವಾಯ್ಸ್/ಕಂಪನಿದಾರರಿಗೆ ಪಾವತಿಸಿ ಬೈಕ್ ಸರಬರಾಜು ಮಾಡಿದ ಬಗ್ಗೆ ನೊಂದಣಿ ಪ್ರತಿ (ಆರ್.ಸಿ.ಪುಸ್ತಕ) ಪಡೆದು ದೃಢೀಕರಿಸಿಕೊಳ್ಳುವುದು ಬ್ಯಾಂಕ್/ಹಣಕಾಸು ಸಂಸ್ಥೆಯ ವ್ಯವಸ್ಥಾಪಕರು ಮತ್ತು ಜಿಲ್ಲಾ ವ್ಯವಸ್ಥಾಪಕರ ಜವಾಬ್ದಾರಿಯಾಗಿರುತ್ತದೆ.

10. **ಸಾಲದ ಮರುಪಾವತಿ:-**ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲವನ್ನು ಅವರು ನಿಗಧಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸುವುದು.
11. **ಸಹಾಯಧನ ವಿತರಣೆ:-**ಬ್ಯಾಂಕ್/ಹಣಕಾಸು ಸಂಸ್ಥೆಗಳು ಕಾರಣಾಂತರಗಳಿಂದ ಅಭ್ಯರ್ಥಿಗೆ ಸಹಾಯಧನ ವಿತರಿಸಿದ ಒಂದು ತಿಂಗಳಲ್ಲಿ ಸಾಲ ಮಂಜೂರು ಮಾಡದಿದ್ದಲ್ಲಿ ಅಂತಹ ಸಹಾಯಧನವನ್ನು ನಿಗಮಕ್ಕೆ ಒಂದು ತಿಂಗಳೊಳಗೆ ಹಿಂತಿರುಗಿಸಬೇಕು.
12. **ನಿಯಮಗಳಿಗೆ ತಿದ್ದುಪಡಿ:-** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರು ವತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲುಅಧಿಕಾರ ಹೊಂದಿರುತ್ತಾರೆ.

(ಕೆ.ಅಶ್ವತ್ಥ) 9/x/20
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ